ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ

ಸಾಕ್ಷಿಗೆ ಇಂದು ದಿನಾಂಕ **26.10.2024** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಃ ಪ್ರತಿವಾದಿಯರ ಪರವಾಗಿ ಶ್ರೀ. ಎಲ್.ಎನ್.ಎಸ್. ವಕೀಲರಿಂದ.

ನಾನು ಖಾಯಂ ಆಗಿ ಕಲಾದಗಿಯಲ್ಲಿ ವಾಸವಾಗಿರುತ್ತೇನೆ. ನನ್ನ ವಿವಾಹವಾಗಿ ಸುಮಾರು 40 ವರ್ಷ ಆಗಿರಬಹುದು. ನನ್ನ ವಿವಾಹವಾದಾಗಿನಿಂದಲೂ ನಾನು ಗಂಡನ ಮನೆ ಕಲಾದಗಿ ಗ್ರಾಮದಲ್ಲೇ ವಾಸವಾಗಿದ್ದೇನೆ ಎಂದರೆ ಸರಿ. ನಾನು ವಿವಾಹವಾಗಿ ಹೋದ ನಂತರ ಮರಳಿ ಯಾವುದೇ ಕಾಲಕ್ಕೂ ಬಂಟನೂರು ಗ್ರಾಮಕ್ಕೆ ಬಂದಿರುವುದಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿ 3 ರವರ ವಿವಾಹವಾಗಿ ಈಗ ಸುಮಾರು 30 ವರ್ಷ ಆಗಿರಬಹುದು. ಅವರು ತನ್ನ ಗಂಡನ ಮನೆಯಾದ ಸೂಳಿಕೇರಿ ಗ್ರಾಮದಲ್ಲಿ ವಾಸವಾಗಿರುವಳು. ವಾದಿ 4 ಮತ್ತು 5 ರವರು ಬಂಟನೂರು ಗ್ರಾಮದಲ್ಲಿ ವಾಸವಾಗಿರುವರು. ಇವರು ಪ್ರತ್ಯೇಕವಾಗಿ ವಾಸವಾಗಿರುವರು. ಇವರು ತಮ್ಮ ಪಾಲೀನ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುವರು ಎಂದರೆ ಸರಿ. ನನಗೆ ಪ್ರತಿವಾದಿ 1 ಮತ್ತು 2 ರವರ ಪರಿಚಯವಿರುವುದು. ಇವರೂ ಸಹ ಬಂಟನೂರು ಗ್ರಾಮದವರು ಎಂದರೆ ಸರಿ. ಇವರು ಗೌರವಯುತವಾದ ಕುಟುಂಬದ ಮನೆತನದ ಸದಸ್ಯರಾಗಿರುತ್ತಾರೆ ಎಂದರೆ ಸರಿ.

ಪ್ರತಿವಾದಿಯರಿಗೆ ಹಿರಿಯರಿಂದ ಬಂದಿರುವ ಸಾಕಷ್ಟು ಆಸ್ತಿ ಇರುವುದು ಎಂದರೆ ಸಾಕ್ಷಿ ನನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸಿರುವರು. ಪ್ರತಿವಾದಿ 1 ಮತ್ತು 2 ರವರು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಖೊಟ್ಟಿ ದಾಖಲೆಯನ್ನು ಮಾಡಿಕೊಂಡಿದ್ದು ಆ ಕಾರಣಕ್ಕಾಗಿ ನ್ಯಾಯಾಲಯಕ್ಕೆ ಬಂದಿರುತ್ತೇನೆ. ನಾನು ಮತ್ತು ಉಳಿದ ವಾದಿಯರು ಅನಕ್ಷರಸ್ಥರಾಗಿದ್ದು ಓದಲು ಮತ್ತು ಬರೆಯಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವು ಇಂಗ್ಲೀಷ ಭಾಷೆಯಲ್ಲಿ ಇರುವುದು ಎಂದರೆ ಸರಿ. ಅದರಲ್ಲಿನ ಸಂಗತಿಗಳನ್ನು ನಮ್ಮ ವಕೀಲರು ಓದಿ ಹೇಳಿರುವರು. ನನ್ನ ಸಾಕ್ಷ್ಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಬರೆಸಿ ಹಾಕಲು ನಮ್ಮ ವಕೀಲರಿಗೆ ನಾನೇ ಮಾಹಿತಿ ನೀಡಿರುವೇನು. ನಾನು ಉಳಿದ ವಾದಿಯರ ಪರವಾಗಿಯೂ ಸಹ ಸಾಕ್ಷಿ ನುಡಿಯುತ್ತಿರುವೇನು.

ದಾವಾ ಆಸ್ತಿಯ ಸರ್ವೆ ನಂ. 12/9 ಮತ್ತೊಂದು 66/1 ಜಮೀನು ಇರುವವು. ಸರ್ವೆ ನಂ. 12/9 ರ ಜಮೀನಿನ ವಿಸ್ತೀರ್ಣ 3 ಎಕರೆ 9 ಗುಂಟೆ ಇರುವುದು. ಸರ್ವೆ ನಂ. 66/1 ರ ಜಮೀನಿನ ವಿಸ್ತೀರ್ಣ 3 ಎಕರೆ 1 ಗುಂಟೆ ಇರುವುದು. ಸರ್ವೆ ನಂ. 12/9 ರ ಜಮೀನು ನೀರಾವರಿ ಜಮೀನು ಎಂದರೆ

ಸರಿಯಲ್ಲ, ಅದು ಒಣಬೇಸಾಯದ ಜಮೀನು ಇರುತ್ತದೆ. ನಾನು ಹಾಜರುಪಡಿಸಿರುವ ನಿಪಿ-1 ರ ದಾಖಲೆಯ ಪ್ರಕಾರ ಭಗಾಯಿತಿ ಜಮೀನು ಎಂದು ನಮೂದು ಮಾಡಿರುವರು ಎಂದರೆ ಸರಿ. ಈ ಪಹಣಿ ಪತ್ರಿಕೆಯಲ್ಲಿ ನನ್ನ ಮತ್ತು ಉಳಿದ ವಾದಿಯರ ಹೆಸರು ದಾಖಲು ಮಾಡಿರುವರು ಎಂದರೆ ಸರಿ.

ಈ ಜಮೀನಿನ ಪಹಣಿ ಪತ್ರಿಕೆಯಲ್ಲಿ ಕಳೆದ 25 ವರ್ಷಗಳಿಂದಲೂ ಯಾವುದೇ ಬದಲಾವಣೆಯಾಗದೇ ನಮ್ಮ ಹೆಸರಿನಲ್ಲೇ ಇರುವುದು ಎಂದರೆ ಸರಿ. ಈ ಸರ್ವೆ ನಂಬರ ಜಮೀನಿನಲ್ಲಿ ಕರ್ನಾಟಕ ನೀರಾವರಿ ನಿಗಮದವರು 7 ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಿಕೊಂಡಿರುವರು ಎಂದರೆ ಸರಿ. ಇವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಸರ್ವೆ ನಂ. 12/6 28 ಗುಂಟೆ ವಿಸ್ತೀರ್ಣ ಇರುವುದು ಎಂದರೆ ಸರಿ. ಸರ್ವೆ ನಂ. 12/6 ಹಾಗೂ ಸರ್ವೆ ನಂ. 12/9 ಈ ಎರಡೂ ಜಮೀನುಗಳು ಒಂದಕ್ಕೊಂದು ಹೊಂದಿಕೊಂಡಿರುವವು ಎಂದರೆ ಸರಿ. ಸರ್ವೆ ನಂ. 12/9 ರ ಜಮೀನಿನ ಚೆಕಬಂದಿ ನನಗೆ ಹೇಳಲು ಬರುವುದಿಲ್ಲ. ಸರ್ವೆ ನಂ. 66 ಜಮೀನಿನ ಚೆಕಬಂದಿ ನನಗೆ ಹೇಳಲು ಆಗುವುದಿಲ್ಲ. ಕಳೆದ 40 ವರ್ಷಗಳಿಂದಲೂ ನಾನು ಗಂಡನ ಮನೆಯಲ್ಲಿ ವಾಸವಾಗಿರುವುದರಿಂದ ದಾವಾ ಜಮೀನುಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ, ಅವುಗಳ ಚೆಕಬಂದಿ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಆ ದಾವಾ ಜಮೀನುಗಳಿಗೆ ನಾವು ಹೋಗದೇ ಇರುವುದರಿಂದ ಅವುಗಳ ಬಗ್ಗೆ ನಮಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನಾನು ಮತ್ತು ಉಳಿದ ವಾದಿಯರು ಯಾವುದೇ ದಾಖಲೆಗಳ ಮೇಲೆ ಹೆಬ್ಬೆಟ್ಟಿನ ಸಹಿಗಳನ್ನು ಮಾಡುತ್ತೇವೆ ಎಂದರೆ ಸರಿ.

ದಿನಾಂಕಃ 21.11.2003 ರಂದು ಸರ್ವೆ ನಂ. 12/6 ಮತ್ತು ಸರ್ವೆ ನಂ. 12/9 ರ ಜಮೀನುಗಳಿಗೆ ಸಂಬಂಧಪಟ್ಟಂತೆ ಪ್ರತಿವಾದಿಗಳಿಗೆ ಖರೀದಿ ಕರಾರು ಪತ್ರ ಬರೆದುಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ದಿನಾಂಕಃ 21.11.2003 ರಂದು ಪ್ರತಿವಾದಿಯರ ಕಡೆಯಿಂದ ರೂ.1,68,300/- ಗಳನ್ನು ಪಡೆದುಕೊಂಡಿದ್ದೇವೆ ಎಂದರೆ ಸಾಕ್ಷಿ ನುಡಿಯುುವುದೇನೆಂದರೆ ಪ್ರತಿವಾದಿಯರ ಕಡೆಯಿಂದ ರೂ.3,33,000/- ಹಣವನ್ನು ಪಡೆದುಕೊಂಡಿರುವುದಾಗಿ ಉತ್ತರಿಸಿರುವರು. ಈ ಖರೀದಿ ಕರಾರು ಪತ್ರದ ಪ್ರಕಾರ ಸರ್ವೆ ನಂ. 12/6 ಹಾಗೂ ಸರ್ವೆ ನಂ. 12/9 ರ ಜಮೀನುಗಳ ಕಬ್ಜೆಯನ್ನು ಪ್ರತಿವಾದಿಯರಿಗೆ ಬಿಟ್ಟುಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನಮಗೆ ಹಣವನ್ನು ಪ್ರತಿವಾದಿ ಹಾಗೇ ನೀಡಿರುವರು, ಯಾವುದೇ ದಾಖಲೆಗಳನ್ನು ಮಾಡಿಕೊಂಡಿರುವುದಿಲ್ಲ. ಸರ್ವೆ ನಂ. 12/9 ರ ಜಮೀನಿನ ಕಬ್ಜೆ ನಾವು ಹೊಂದಿದ್ದು ಅದಕ್ಕೆ ಸಂಬಂಧಪಟ್ಟಂತೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವೇನು.

ದಿನಾಂಕಃ 23.08.2004 ರಂದು ನಾನು ಮತ್ತು ಉಳಿದ ವಾದಿಯರು ಕೂಡಿಕೊಂಡು ಸರ್ವೇ ನಂ. 66/1 ರ ಜಮೀನಿನಲ್ಲಿ 3 ಎಕರೆ ಜಮೀನನ್ನು ಪ್ರತಿವಾದಿ 1 ರವರಿಗೆ ನೊಂದಾಯಿತ ಖರೀದಿ ಪತ್ರದೊಂದಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿ 1 ರವರು ನಮ್ಮನ್ನು ಉಪನೊಂದಣಿ ಕಚೇರಿಗೆ ಕರೆಸಿಕೊಂಡು ನಮಗೆ ಗೊತ್ತಾಗದ ಹಾಗೆ ಖೊಟ್ಟಿಯಾಗಿ ಖರೀದಿ ಕರಾರುಪತ್ರವನ್ನು ಸೃಷ್ಟಿಮಾಡಿಕೊಂಡಿರುವರು ನಾನು ಮತ್ತು ಉಳಿದ ವಾದಿಯರು ಅನಕ್ಷರಸ್ಥರಾಗಿರುವುದರಿಂದ. ಪ್ರತಿವಾದಿ 1 ರವರು ಉತಾರದಲ್ಲಿ ಹೆಸರು ಕೂಡಿಸಬೇಕಾಗಿರುವುದು ಎಂದು ಹೇಳಿದ್ದು ಆ ಕಾರಣಕ್ಕಾಗಿ ತಾವು ಸಹಿ ಮಾಡಿರುವುದಾಗಿ ಎಂದು ಸಾಕ್ಷಿ ಉತ್ತರಿಸಿರುವರು. ದಿನಾಂಕಃ 23.08.2004 ರ ನೊಂದಾಯಿತ ಖರೀದಿ ಕರಾರು ಪತ್ರದ ಎಲ್ಲಾ ಸಂಗತಿಗಳನ್ನು ತಿಳಿದುಕೊಂಡೇ ಸಹಿ ಮಾಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಪ್ರತಿವಾದಿಯರಿಗೆ ಖರೀದಿ ಕೊಟ್ಟ ಬಗ್ಗೆ ಗೊತ್ತಿತ್ತು ಎಂದರೆ ಸಾಕ್ಷಿ ನುಡಿಯುವುದೇನೆಂದರೆ ಅದು ಖೊಟ್ಟಿ ದಾಖಲೆಯಾಗಿರುವುದಾಗಿ ಎಂದು ಗೊತ್ತಿತ್ತು ಎಂದರೆ ಸಾಕ್ಷಿ ನುಡಿಯುವುದೇನೆಂದರೆ 28 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ಮಾತ್ರ ಗೊತ್ತಿತ್ತು ಎಂದು ಉತ್ತರಿಸಿರುತ್ತಾರೆ.

ಮುಂದಿನ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದರಿಂದ ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ